







# ನೋ ಬ್ಯಾಗ್ ಡೇ !

## ಸಂತಸ ಕಲಿಕೆಯ ಹೊಸ ನೋಟ....!

– ಆರ್.ಬಿ.ಗುರುಬಸವರಾಜ ಹೊಳಗುಂದಿ, ಶಿಕ್ಷಕರು, ಹೊಳಗುಂದಿ,
ಹಡಗಲಿ ತಾ. ಬಳ್ಳಾರಿ ಜಿಲ್ಲೆ, ಮೊ: 9902992905

'ಮಕ್ಕಳೇ ನಾಳೆ ನಮ್ಮ ಶಾಲೆಯಲ್ಲಿ ಕಾರ್ಯಕ್ರಮ ಇದೆ. ವಿಶೇಷ ಅತಿಥಿಗಳು ಬರುತ್ತಿದ್ದಾರೆ, ನೀವೆಲ್ಲಾ ಶಿಸ್ತಿನಿಂದ ಬರಬೇಕು' ಎಂದು ಶಿಕ್ಷಕರು ಹೇಳುತ್ತಿದ್ದಂತೆ ತರ್ಲೆ ರಮೇಶ 'ಸಾರ್ ಪಾಟಿಚೀಲ ತರ್ಬೇಕಾ?' ಎಂದು ಪ್ರಶ್ನಿಸಿದ. ಪಾಟಿಚೀಲ ತರಬೇಡಿ ಎಂದು ಶಿಕ್ಷಕರು ಹೇಳುತ್ತಿದ್ದಂತೆ ಮಕ್ಕಳೆಲ್ಲಾ ಕೇಕೆಹಾಕಿ ಸಂಭ್ರಮಿಸಿದರು. ಇದು ಯಾವುದೋ ಒಂದು ಶಾಲಾ ಮಕ್ಕಳ ಖುಷಿಯಲ್ಲ. ಪಾಟಿಚೀಲ(ಸ್ಕೂಲ್ ಬ್ಯಾಗ್) ಹೊರುವ ಪ್ರತಿಯೊಬ್ಬ ಮಗುವಿನ ತುಡಿತ–ಮಿಡಿತ ಇದಾಗಿದೆ. ಮಣಭಾರದ ಸ್ಕೂಲ್ ಬ್ಯಾಗ್ ಮಕ್ಕಳಿಗೆ ಅಲರ್ಜಿ ಎಂಬುದನ್ನು ಅರ್ಥಮಾಡಿಕೊಳ್ಳಲು ಇದೊಂದೇ ನಿದರ್ಶನ ಸಾಕು.

ಯಾವುದೇ ಕ್ಷೇತ್ರದಲ್ಲಿ ಸ್ವತಂತ್ರವಾಗಿ ಮುನ್ನುಗ್ಗಲು ಶೈಕ್ಷಣಿಕ ಅರ್ಹತೆಯೊಂದಿಗೆ ಪಠ್ಯೇತರ ಚಟುವಟಿಕೆಗಳೂ ಅಗತ್ಯ. ವ್ಯಕ್ತಿಯ ಮನೋಸ್ಥೈರ್ಯ ಮತ್ತು ವ್ಯಕ್ತಿತ್ವ ವಿಕಸನಕ್ಕಾಗಿ ಪಠ್ಯೇತರ ಚಟುವಟಿಕೆಗಳು ಅವಶ್ಯಕ ಎಂಬುದನ್ನು ಶಿಕ್ಷಣ ತಜ್ಞರು, ಮನೋವಿಜ್ಞಾನಿಗಳು ಹೇಳುತ್ತಲೇ ಬಂದಿದ್ದಾರೆ. ಆದರೆ ನಾವ್ಯಾರೂ ಈ ಬಗ್ಗೆ ಗಂಭೀರವಾಗಿ ಆಲೋಚಿಸುತ್ತಲೇ ಇಲ್ಲ. ಮಕ್ಕಳ ಧನಾತ್ಮಕ ಬೆಳವಣಿಗೆಯ ಬಗ್ಗೆ ಆಸಕ್ತಿ ಇರುವ ಪ್ರತಿಯೊಬ್ಬ ಪಾಲುದಾರರೂ ಈ ಬಗ್ಗೆ ಆಲೋಚಿಸಿ ಕಾರ್ಯತತ್ಪರರಾದರೆ ತಮ್ಮ ಮಕ್ಕಳ ದೈನಂದಿನ ಚಟುವಟಿಕೆಗಳಲ್ಲಿ ಬದಲಾವಣೆ ತರಬಹುದು.

ತರಗತಿ ಪರಿಣಾಮಕಾರಿಯಾಗಿ ಇರಬೇಕು ಹಾಗೂ ಮಕ್ಕಳ ಕಲಿಕೆ ವೈವಿಧ್ಯಮಯವಾಗಿದ್ದು ಶಾಶ್ವತವಾಗಿರಬೇಕು ಎಂದು ಪ್ರತಿಯೊಬ್ಬ ಶಿಕ್ಷಕರು ಬಯಸುತ್ತಾರೆ. ಇದಕ್ಕೆ ಸಮಯ ಮತ್ತು ಬದ್ಧತೆಯ ಯೋಜನೆ ಅಗತ್ಯ. ಆ ನಿಟ್ಟಿನಲ್ಲಿ ಅನೇಕ ಪ್ರಯೋಗಾತ್ಮಕ ಚಟುವಟಿಕೆಗಳು ನಡೆಯುತ್ತಲೇ ಇವೆ. ಪ್ರೋಬೆಲ್, ಮಾಂಟೆಸ್ಸೋರಿ, ರವೀಂದ್ರನಾಥ ಠಾಕೂರ್, ಮಹಾತ್ಮ ಗಾಂಧಿ ಮುಂತಾದ ಮಹನೀಯರು ಕಲಿಸುವಿಕೆಯಲ್ಲಿ ಹೊಸತನವನ್ನು ಹುಡುಕುವ ಪ್ರಯತ್ನ ಮಾಡಿ ಯಶಸ್ಸು ಕಂಡಿದ್ದಾರೆ. ಇಂತಹ ಅನೇಕ ಹೊಸ ಪ್ರಯತ್ನಗಳು ಅಲ್ಲಲ್ಲಿ ಸದ್ದಿಲ್ಲದೇ ನಡೆಯುತ್ತಲೇ ಇವೆ. ಅಂತಹ ಒಂದು ವಿನೂತನ ಕಲಿಕಾ ಚಟುವಟಿಕೆಯೇ 'ನೋ ಬ್ಯಾಗ್ ಡೇ'.

**ಏನಿದು ನೋ ಬ್ಯಾಗ್ ಡೇ? :** ವಾರದಲ್ಲಿ ಒಂದು ದಿನ ಪುಸ್ತಕ(ಚೀಲ) ಹೊರುವ ಶ್ರಮವನ್ನು ತಪ್ಪಿಸಿ, ಪಠ್ಯಕ್ಕೆ ಪೂರಕವಾದ ಸಹಪಠ್ಯ ಚಟುವಟಿಕೆಗಳನ್ನು ಆಯೋಜಿಸುವುದೇ ನೋ ಬ್ಯಾಗ್ ಡೇ ಪರಿಕಲ್ಪನೆ. ಇಂತಹ ವಿನೂತನ ಪ್ರಯತ್ನವನ್ನು ಗದಗ ಜಿಲ್ಲೆ ಗದಗ ಗ್ರಾಮೀಣ ವಲಯದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ನೀರಲಗಿಯಲ್ಲಿ ಪ್ರಾರಂಭಿಸಿ ಮಕ್ಕಳ ಕಲಿಕೆಯಲ್ಲಿ ಹೊಸ ಸಂಚಲನ ಮೂಡಿಸುವಲ್ಲಿ ಯಶಸ್ಸು ಕಂಡಿದ್ದಾರೆ.

ಸೋಮವಾರದಿಂದ ಶುಕ್ರವಾರದವರೆಗಿನ ಪಠ್ಯೇತರ ವಿಷಯಗಳಾದ ಚಿತ್ರಕಲೆ, ಎಸ್.ಯು.ಪಿ.ಡಬ್ಲ್ಯೂ, ಮೌಲ್ಯ ಶಿಕ್ಷಣದ ಅವಧಿಗಳನ್ನು ಶನಿವಾರದಂದು ಕ್ರೋಢೀಕರಿಸಿ, ಶಾಲೆಯಲ್ಲಿರುವ ಸಾಮಾನ್ಯ ಶಿಕ್ಷಕರೇ ವಿವಿಧ ಪಠ್ಯಪೂರಕ ಸಹಪಠ್ಯ ಚಟುವಟಿಕೆಗಳನ್ನು

ಆಯೋಜಿಸುವುದು. ಆ ಮೂಲಕ ಮಕ್ಕಳಲ್ಲಿರುವ ಸೃಜನಶೀಲತೆಯನ್ನು ಹೆಚ್ಚಿಸುವ ಮತ್ತು ಪುಸ್ತಕಗಳ ಹೊರೆಯನ್ನು ವಾರದಲ್ಲಿ ಒಂದು ದಿನದ ಮಟ್ಟಿಗೆ ಕಡಿತಗೊಳಿಸುವ ಪ್ರಯತ್ನ ಇದಾಗಿದೆ. ಹಾಗಾಗಿ ಪ್ರತಿ ಶನಿವಾರವನ್ನು 'ಪುಸ್ತಕ ಚೀಲ ರಹಿತ ದಿನ ಅಥವಾ ಸೃಜನಶೀಲ ದಿನ'ವನ್ನಾಗಿ ಆಚರಿಸಲಾಗುತ್ತದೆ. ಇದಕ್ಕೆ ಶಿಕ್ಷಕರು, ಪಾಲಕರು, ಮಕ್ಕಳು ಮತ್ತು ಅಧಿಕಾರಿಗಳಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

**ಏಕೆ ನೋ ಬ್ಯಾಗ್ ಡೇ?:** ಇಂದಿನ ಪಾಲಕರು ಅಂಕಗಳಿಸುವುದೇ ತಮ್ಮ ಮಕ್ಕಳ ಮುಖ್ಯ ಗುರಿ ಎಂಬಂತೆ ಅವರನ್ನು ಬೆಳೆಸುತ್ತಿದ್ದಾರೆ. ಇದು ಮಕ್ಕಳಲ್ಲಿ ತೀವ್ರ ಒತ್ತಡವನ್ನು ಉಂಟುಮಾಡುತ್ತಿದೆ. ಹೋಂವರ್ಕ್, ಟ್ಯೂಷನ್‌ಗಳ ಹೆಸರಿನಲ್ಲಿ ಮಕ್ಕಳ ಆಟ, ಮನರಂಜನೆಗೆ ಕಡಿವಾಣ ಬೀಳುತ್ತಿದೆ. ಇದರಿಂದ ಮಕ್ಕಳಲ್ಲಿ ಖಿನ್ನತೆ, ಮಾನಸಿಕ ತೊಳಲಾಟಗಳಂತಹ ಮಾನಸಿಕ ಕಾಯಿಲೆಗಳು ಅಂಟಿಕೊಳ್ಳುತ್ತಿವೆ. ಪಠ್ಯ ಚಟುವಟಿಕೆಗಳು ಎಷ್ಟು ಪ್ರಮುಖವೋ, ಪಠ್ಯೇತರ ಚಟುವಟಿಕೆಗಳೂ ಅಷ್ಟೇ ಮುಖ್ಯ. ಇದನ್ನು ಪಾಲಕರಿಗೆ ಮನವರಿಕೆ ಮಾಡಬೇಕಾದ ಅಗತ್ಯ ಇಂದು ಅನಿವಾರ್ಯವಾಗಿದೆ. ಮಕ್ಕಳಲ್ಲಿ ನಕಾರಾತ್ಮಕತೆಯನ್ನು ತೊಡೆದು ಹಾಕಿ ಧನಾತ್ಮಕ ಚಿಂತನೆಯತ್ತ ಮುನ್ನಡೆಯಲು ಇಂತಹ ಕಲಿಕೆ ಅಗತ್ಯ.

**ಉದ್ದೇಶಗಳು :** * ವಾರದ ಒಂದು ದಿನ ಪುಸ್ತಕ ಚೀಲದ ಭಾರವನ್ನು ತಪ್ಪಿಸುವುದು * ಸಹಪಠ್ಯ ಚಟುವಟಿಕೆಗಳಲ್ಲಿ ಎಲ್ಲ ವಿದ್ಯಾರ್ಥಿಗಳು ಭಾಗವಹಿಸುವಂತೆ ಮಾಡುವುದು * ಸ್ವಂತ ಜ್ಞಾನ ಕಟ್ಟಿಕೊಳ್ಳುವ ಮತ್ತು ಅನ್ವಯಿಸುವ ಹಂತವನ್ನು ಬಲಗೊಳಿಸುವುದು. * ವಿದ್ಯಾರ್ಥಿಗಳ ಆಸಕ್ತಿ ಮತ್ತು ಅಭಿರುಚಿಗಳಿಗೆ ಸೂಕ್ತ ಅವಕಾಶ ಮತ್ತು ಪ್ರೇರಣೆ. * ಪಠ್ಯಮೂಲಕ ಕಲಿತ ಅನೇಕ ಅಂಶಗಳ ಪುನರ್ಬಲನ ಮತ್ತು ಮೌಲ್ಯಮಾಪನ * ಪಠ್ಯಪುಸ್ತಕದಾಚೆಗೂ ಕಲಿಕೆಯನ್ನು ವಿಸ್ತರಿಸುವುದು. ಅಭಿವ್ಯಕ್ತಿಯ ಕೌಶಲವನ್ನು ವೃದ್ಧಿಸುವುದು. ಶಾಲೆಗೆ ಬನ್ನಿ ಶನಿವಾರ, ಕಲಿಕೆಗೆ ನೀಡಿ ಸಹಕಾರ ಕಾರ್ಯಕ್ರಮವನ್ನು ಅರ್ಥಪೂರ್ಣಗೊಳಿಸುವುದು. * ಸ್ಥಳೀಯ ಕಲಾವಿದರು, ಸಂಗೀತಗಾರರು, ಸಂಪನ್ಮೂಲ ವ್ಯಕ್ತಿಗಳ ಸೇವೆಯನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಮೂಲಕ ಸಮುದಾಯವನ್ನು ಕಲಿಕೆಯಲ್ಲಿ ತೊಡಗಿಸಿಕೊಳ್ಳುವುದು. * ಸಹಪಠ್ಯಚಟುವಟಿಕೆಗಳನ್ನು ವ್ಯವಸ್ಥಿತವಾಗಿ ಮತ್ತು ಯೋಜನಾಬದ್ಧವಾಗಿ ಸಂಘಟಿಸುವ ಕೌಶಲವನ್ನು ಶಿಕ್ಷಕರಲ್ಲಿ ಬೆಳೆಸುವುದು.

**ಅನುಷ್ಠಾನದ ಪ್ರಯತ್ನಗಳು:** ಮುಖ್ಯ ಶಿಕ್ಷಕರು ಮತ್ತು ಸಹಶಿಕ್ಷಕರ ಸಭೆಯಲ್ಲಿ ಈ ಕಾರ್ಯಕ್ರಮದ ಅನುಷ್ಠಾನದ ಕುರಿತು ಚರ್ಚಿಸಿ, ಈ ಕೆಳಗಿನಂತೆ ನಿರ್ಧಾರಗಳನ್ನು ತೆಗೆದುಕೊಳ್ಳಲಾಯಿತು.

ಮೊದಲು ಪಠ್ಯ ವಿಷಯಗಳನ್ನು ಹೊರತುಪಡಿಸಿ ಸಹಪಠ್ಯಕ್ಕೆ ಒಂದು ವಾರದಲ್ಲಿ ಸಿಗುವ ಅವಧಿಗಳನ್ನು ಲೆಕ್ಕ ಹಾಕಲಾಯಿತು.
ಕಾರ್ಯಕ್ರಮದ ಅನುಷ್ಠಾನಕ್ಕಾಗಿ ವೇಳಾಪಟ್ಟಿಯನ್ನು ಹೊಂದಾಣಿಕೆ ಮಾಡಿಕೊಳ್ಳಲಾಯಿತು. (ಸೋಮವಾರದಿಂದ – ಶುಕ್ರವಾರದ ವರೆಗಿನ ಸಾ.ಉ.ಉ.ಕಾ. ಅವಧಿಗಳನ್ನು ಪಠ್ಯಬೋಧನಾ ಅವಧಿಗಳನ್ನಾಗಿ ಮಾಡಿಕೊಂಡು, ಶನಿವಾರದ ಕಾರ್ಯಕ್ರಮಕ್ಕೆ ಹೊಂದಾಣಿಕೆ ಮಾಡಿಕೊಳ್ಳಲಾಯಿತು.) ವಿವಿಧ ಚಟುವಟಿಕೆಗಳ ಅಂದರೆ 22 ವಿಭಾಗಗಳ ಪಟ್ಟಿ ತಯಾರಿಸಲಾಯಿತು. ಈ ವಿಭಾಗಗಳನ್ನು ನಿರ್ವಹಿಸುವ ಮತ್ತು ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ನೀಡುವ ಸಂಪನ್ಮೂಲ ವ್ಯಕ್ತಿಗಳನ್ನು (ಸ್ಥಳೀಯ ಮತ್ತು ಹೊರಗಿನ) ಗುರುತಿಸಲಾಯಿತು. ಅಗತ್ಯವಿರುವ ಸಾಮಗ್ರಿಗಳ ಪಟ್ಟಿಯನ್ನು ತಯಾರಿಸಲಾಯಿತು. ಕೊಠಡಿಗಳ ಸಂಖ್ಯೆಗನುಗುಣವಾಗಿ ಪ್ರತಿ ವಾರ ಯಾವ ಯಾವ ವಿಭಾಗಗಳಲ್ಲಿ ಚಟುವಟಿಕೆಗಳನ್ನು ನಡೆಸುವ ಕುರಿತು ಪಟ್ಟಿ ತಯಾರಿಸಲಾಯಿತು. ಈ ಮೂಲಕ 2016–17ನೇ ಶೈಕ್ಷಣಿಕ ವರ್ಷದ ಕ್ರಿಯಾಯೋಜನೆ ಸಿದ್ಧವಾಯಿತು. ಕ್ರಿಯಾ ಯೋಜನೆಯಂತೆ ಕಾರ್ಯ ಪ್ರವೃತ್ತರಾದರು.

ಪ್ರಾರಂಭದಲ್ಲಿ ಶಾಲಾ ಶಿಕ್ಷಕರೇ ತಮ್ಮ ಹಣದಿಂದ ಶಾಲೆಗೆ ಬಣ್ಣ ಹಚ್ಚಿ ಭೌತಿಕ ಅಂದ ಹೆಚ್ಚಿಸಿದರು. ನಂತರ ಪ್ರಾರಂಭದ ಮೂರ್‍ನಾಲ್ಕು ವಾರಗಳಲ್ಲಿ ಸಂಪನ್ಮೂಲ ವ್ಯಕ್ತಿಗಳನ್ನು ಕರೆದು ಕಾರ್ಯಕ್ರಮ ಆಯೋಜಿಸಿದರು. ನಂತರ ಶಾಲಾ ಶಿಕ್ಷಕರೇ ಸ್ವಯಂ ಪ್ರೇರಣೆಯಿಂದ ಸಂಪನ್ಮೂಲ ಶಿಕ್ಷಕರಾಗುವ ಕೌಶಲ ಬೆಳೆಸಿಕೊಂಡರು.

ಕಾರ್ಯಕ್ರಮದಲ್ಲಿ ಆಯೋಜಿಸಿದ ಚಟುವಟಿಕೆಗಳು: * ಆಶುಭಾಷಣ * ಚರ್ಚಾಕೂಟ * ಗೋಡೆಪತ್ರಿಕೆ ತಯಾರಿ * ಗೀತಗಾಯನ * ಚಿತ್ರಕಲೆ * ವಾದ್ಯ ಸಂಗೀತ * ಪಾತ್ರಾಭಿನಯ * ರಸಪ್ರಶ್ನೆ (ಕ್ವಿಜ್) * ವಿಜ್ಞಾನದ ಸರಳ ಪ್ರಯೋಗಗಳು * ಕ್ಲೇ ಮಾಡಲಿಂಗ್ * ರಂಗೋಲಿ * ಸೆಮಿನಾರ್ * ದಿನಾಚರಣೆ * ಜಾಥಾ * ಪುಸ್ತಕ ಪರಿಚಯ * ಕಥೆ–ಕವಿತೆ ರಚನೆ * ಪ್ರಬಂಧ ಬರಹ * ಭಾಷಾ ಆಟಗಳು * ಮೋಜಿನ ಗಣಿತ * ಗ್ರಾಮೀಣ ಆಟಗಳು * ಒಗಟು/ಗಾದೆಗಳು * ಪರಿಸರ ವೀಕ್ಷಣೆ

**ಫಲಶೃತಿ :** ಮಕ್ಕಳು ಈಗ ಸಮಯದ ಮಿತಿಯನ್ನು ಅರಿತಿದ್ದಾರೆ. ಅವರಲ್ಲಿ ಸಭಾಕಂಪನ (ಭಯ) ತೊಲಗಿದೆ. ವಿಷಯ ಮಂಡನಾ ಕೌಶಲ ಬೆಳೆದಿದೆ. ಆದ್ದರಿಂದ ಆತ್ಮವಿಶ್ವಾಸ ಹೆಚ್ಚಿದೆ. ಒಂದು ವಿಷಯದ ಸಾಧಕ ಮತ್ತು ಬಾಧಕವನ್ನು ಅರಿಯುವ ವಿಮರ್ಶಾತ್ಮಕ ದೃಷ್ಟಿಕೋನವನ್ನು ಬೆಳೆಸಿಕೊಂಡಿದ್ದಾರೆ. ತಾವು ಬರೆದ ಕಥೆ–ಕವಿತೆ–ಚಿತ್ರ ಮುಂತಾದ ವಿಷಯಗಳ ಪ್ರಕಟಣೆಗೆ ಅವಕಾಶ ಪಡೆದಿದ್ದಾರೆ. ವೃತ್ತ ಬಂದಿರುವ ಕಥೆ–ಕವಿತೆ–ಚಿತ್ರ, ಪ್ರಚಲಿತ ವಿಷಯ, ವಿಜ್ಞಾನ ವಿನೋದ ಲೇಖನಗಳನ್ನು ಗುರುತಿಸುವ ಕೌಶಲ ಹೊಂದಿದ್ದಾರೆ. ಇತರರಲ್ಲಿರುವ ಕೌಶಲ್ಯಗಳನ್ನು ಕಂಡು ಪರಸ್ಪರ ಮೆಚ್ಚುವರು. ತಂಡದಲ್ಲಿ ಕಾರ್ಯನಿರ್ವಹಿಸುವ ಮತ್ತು ಹೊಂದಾಣಿಕೆ ಗುಣಗಳನ್ನು ಬೆಳೆಸಿಕೊಂಡಿದ್ದಾರೆ. ಸ್ಥಳೀಯ ಜನಪದ, ಭಜನೆ ಹಾಡುಗಾರರ ಪರಿಚಯವನ್ನು ಹೊಂದಿ ಮತ್ತು ಅವರ ಸಹಾಯವನ್ನು ಪಡೆದಿದ್ದಾರೆ. ಪಠ್ಯ ಮತ್ತು ಇತರೆ ವಿಷಯಗಳಿಗೆ ಸಂಬಂಧಿಸಿದಂತೆ ಚಿತ್ರಗಳನ್ನು, ನಕ್ಷೆಗಳನ್ನು ಬಿಡಿಸುವ ಕೌಶಲವನ್ನು ಹೊಂದಿದ್ದಾರೆ.



ಪುಟ: 28 ಕ್ಕೆ...